# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 16-03-2021 ಪ್ರಶ್ನೆ ಸಂಖ್ಯೆ : 1117 (1372)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 16-03-2021

ಉತ್ತರಿಸುವ ಸಚಿವರು: ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ವಿಷಯ : ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಪಡಿತರ ವಿತರಣೆಯ ಕುರಿತು

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಹಕಾರ ಸಂಘದ ಅಧೀನದ ಪಡಿತರ ವಿತರಣಾ ಕೇಂದ್ರಗಳು ಮತ್ತು ಖಾಸಗಿ ಪಡಿತರ ವಿತರಣಾ ಕೇಂದ್ರಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) ಪಡಿತರ ವಿತರಣಾ ಕೇಂದ್ರದ ಮಂಜೂರಾತಿಗೆ ಇರುವ ಮಾನದಂಡಗಳು ಯಾವುವು; (ಆದೇಶದ ಪ್ರತಿಯನ್ನು ಒದಗಿಸುವುದು)

(ಆ) ಎಪಿಎಲ್ ಮತ್ತು ಬಿಪಿಎಲ್ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿರುವ ಪಡಿತರಗಳು ಯಾವುವು; ಅವುಗಳ ಪ್ರಮಾಣವೆಷ್ಟು; ಇವುಗಳ ಗುಣಮಟ್ಟದ ಪರಿಶೀಲನೆಗೆ ಸಮಿತಿಯನ್ನು ರಚಿಸಲಾಗುತ್ತಿದೆಯೇ; ಕಳಪೆ ಗುಣಮಟ್ಟದ ಪಡಿತರದ ವಿತರಣೆ ತಪ್ಪಿಸಲು ಸರಕಾರ ಕೈಗೊಂಡ ಕ್ರಮಗಳು ಯಾವುವು;

(ಇ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಳಿಯ ಕೆಂಪು ಅಕ್ಕಿ (Boiled Rice) ಬೇಡಿಕೆಯಿದ್ದು, ಸ್ಥಳೀಯವಾಗಿ ಬೆಳೆದ ಈ ಕೆಂಪು ಅಕ್ಕಿ (Boiled Rice) ಪಡಿತರ ವಿತರಣೆಗೆ ಸರಕಾರ ಕ್ರಮವಹಿಸುವುದೇ?